(ಅ) ೧. ಪಂಚವಾರ್ಷಿಕ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯಲ್ಲೂ ಒಂದು ಸರ್ಕಾರಿ ಡೈರಿ ಯೋಜನೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ಪ್ರಕಾರ ಈಗ ಯಾವ ಜಿಲ್ಲೆಗಳಲ್ಲಿ ಸರ್ಕಾರಿ ಹಾಲು ಸರಬರಾಜು ಯೋಜನೆ ಸ್ಥಾಪಿಸಿಲ್ಲವೋ ಅಂತಹ ಜಿಲ್ಲೆಗಳಲ್ಲಿ ಮುಂದೆ ಹಾಲು ಸರಬರಾಜು ಯೋಜನೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

೨. ವಿಶ್ವ ಬ್ಯಾಂಕಿನಿಂದ ಪಡೆಯಲಾಗುವ ನೆರವಿನಿಂದ ಈ ಕೆಳಕಂಡ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದ ಹಾಲು ಉತ್ಪತ್ತಿ ಹಾಗೂ ಸರಬರಾಜು ಯೋಜನೆಯನ್ನು ಕೈಗೊಳ್ಳಲು ಸರ್ಕಾರ ಕಾರ್ಯ ಕೈಗೊಂಡಿದೆ.

(೧) ಬೆಂಗಳೂರು ಜಿಲ್ಲೆ
(೨) ಕೋಲಾರ ಜಿಲ್ಲೆ
(೩) ತುಮಕೂರು ಜಿಲ್ಲೆ
(೪) ಹಾಸನ ಜಿಲ್ಲೆ
(೫) ಮೈಸೂರು ಜಿಲ್ಲೆ
(೬) ಕೊಡಗು ಜಿಲ್ಲೆ
(೭) ಚಿಕ್ಕಮಗಳೂರು ಜಿಲ್ಲೆ
(೮) ಮಂಡ್ಯ ಜಿಲ್ಲೆ

ರಾಜ್ಯದಲ್ಲಿ ಸಣ್ಣ ಹಿಡುವಳಿದಾರರಿಗೆ ಮತ್ತು ಹರಿಜನ ಗಿರಿಜನರಿಗೆ ವ್ಯವಸಾಯ ಉಪಕರಣಗಳನ್ನೊದಗಿಸುವ ಯೋಜನೆ

(೬) ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ)—

ವ್ಯವಸಾಯ ಹಾಗು ಪಶುಸಂಗೋಪನಾ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ರಾಜ್ಯದಲ್ಲಿ ಸಣ್ಣ ಸಣ್ಣ ಜಮೀನು ಹಿಡುವಳಿದಾರರಾದ ಬಡ ಹರಿಜನ ಗಿರಿಜನರಿಗೆ ಬೀಜ, ಗೊಬ್ಬರ, ವ್ಯವಸಾಯ ಉಪಕರಣಗಳನ್ನು ಮತ್ತು ಟ್ರಾಕ್ಟರು, ಬುಲ್‌ಡೋಜರುಗಳನ್ನು ರಿಯಾಯ್ತಿ ದರದಲ್ಲಿ ಒದಗಿಸಲು ಒಂದು ಯೋಜನೆಯನ್ನು ಸರ್ಕಾರದವರು ಮಾಡಿದ್ದಾರೆಯೆ;

(ಆ) ಹಾಗಾದರೆ ಆ ಯೋಜನೆಯನ್ನು ಯಾವಾಗ ಕಾರ್ಯಗತ ಮಾಡರಾಗುವುದು ?

ಶ್ರೀ ಎನ್. ಚಿಕ್ಕೇಗೌಡ.— ವ್ಯವಸಾಯ ಹಾಗು ಪಶುಸಂಗೋಪನಾ ಮಂತ್ರಿಗಳು

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಮೂಡಿಗೆರೆ ತಾಲೂಕಿನ ರಸ್ತೆಗಳನ್ನು ಆರ್.ಸಿ. ಪ್ರೋಗ್ರಾಂ ಅನ್ವಯ ದುರಸ್ತಿ ಮಾಡುವುದು

೭. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ)—

ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಸರ್ಕಾರದವರು ಈ ಕೆಳಗೆ ಕಂಡ ರಸ್ತೆಗಳನ್ನು ಆರ್. ಸಿ. ಪ್ರೋಗ್ರಾಂಗೆ ಸೇರಿಸಿ ರಸ್ತೆ ಮಾಡಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲಮಾಡಿಕೊಡುವ ಉದ್ದೇಶವಿದೆಯೆ ;

(೧) ಮೂಡಿಗೆರೆ ತಾಲೂಕು ಗೋಣಿಬೀಡು ಹೋಬಳಿ ಗೌಡಳ್ಳಿ ಪೇಡಿಕೆ, ಮೆಕನ ಗದ್ದೆ, ದೇವುಂದಕ್ಕೆ ಹೋಗುವ ರಸ್ತೆ—೧೨ ಮೈಲಿ.

(೨) ಮೂಡಿಗೆರೆ ತಾಲೂಕು, ಗೋಣಿಬೀಡು ಹೋಬಳಿ, ಗೌಡಳ್ಳಿಯಿಂದ ಹೊನ್ನೆಹಳ್ಳಿ ಮಾರ್ಗವಾಗಿ ದೇವುಂದಕ್ಕೆ ಹೋಗಲು ರಸ್ತೆ—೫ ಮೈಲಿ.

(೩) ಮೂಡಿಗೆರೆ ತಾಲೂಕು, ಗೋಣಿಬೀಡು ಹೋಬಳಿ ಗೌಡಣ್ಣನ ಕೆರೆಯಿಂದ ಕನ್ನಳ್ಳಿ ಮಾರ್ಗವಾಗಿ ದೇವುಂದ ಗ್ರಾಮಕ್ಕೆ ಹೋಗಲು ರಸ್ತೆ—೩೧/೨ ಮೈಲಿ,

(೪) ಗೋಣಿಬೀಡು ಹೋಬಳಿ ಕಣಚೂರಿಂದ ಕೂಗ್ರ ಮಾರ್ಗವಾಗಿ ದೇವುಂದ ಗ್ರಾಮಕ್ಕೆ ರಸ್ತೆ—೨೧/೨ ಮೈಲಿ.